# ನಗರಸಭಾ ಕಾರ್ಯಾಲಯ, ರಾಮನಗರ

ನಸರಾ/ಕಾವಿ/ಸ.ಅ/ಟೆಂಡರ್/SFC/12/2006-07 ದಿ:24-03-2007

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಮತ್ತು ನಗರಸಭೆಯಲ್ಲಿ 2006-07 ನೇ ಸಾಲಿನಲ್ಲಿ ನೋಂದಣಿ ಮಾಡಿಕೊಂಡ ಗುತ್ತಿಗೆದಾರರಿಂದ ಎಸ್.ಎಫ್.ಸಿ. ಅನುದಾನದ ಹಾಗು ಮುಕ್ತನಿಧಿಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಲ್ಲಿ ಕ್ರ.ಸಂ. 1 ಕ್ಕೆ ಐಟಂವಾರು ಹಾಗು ಬಾಕಿ ಉಳಿದ ಕಾಮಗಾರಿಗಳಿಗೆ ಶೇಕಡವಾರು ಟೆಂಡರ್‌ಗಳನ್ನು ದ್ವಿಪ್ರತಿಯಲ್ಲಿ ನಿಗಧಿತ ನಮೂನೆಯಲ್ಲಿ ಪೌರಾಯುಕ್ತರು ನಗರಸಭೆ, ರಾಮನಗರ ಇವರಿಂದ ಕರೆಯಲಾಗಿದೆ.

1. ಗುತ್ತಿಗೆದಾರರು ಸಂಬಂಧಿಸಿದ ಗುತ್ತಿಗೆ ನೋಂದಣಿ ಪ್ರತಿಯೊಂದಿಗೆ ಟೆಂಡರ್ ಫಾರಂಗಾಗಿ ಕೋರಿಕೆಯನ್ನು ದಿನಾಂಕ: 05-04-2007 ಸಾಯಂಕಾಲ 4.00 ಘಂಟೆಯೊಳಗಾಗಿ ಸಂಬಂಧಿಸಿದಂತೆ ಫಾರಂ ಶುಲ್ಕ ಕ್ರ.ಸಂ. 1 ರ ಕಾಮಗಾರಿಗೆ ರೂ. 1500 + ತೆರಿಗೆ ಹಾಗು ಕ್ರ.ಸಂ. 2, 3 ರ ಕಾಮಗಾರಿಗೆ ರೂ. 500 + ತೆರಿಗೆ ಪಾವತಿಯೊಂದಿಗೆ ಟೆಂಡರ್ ಫಾರಂ ಕೋರಿಕೆಯನ್ನು ಸಲ್ಲಿಸಬಹುದಾಗಿದೆ.

2. ಖಾಲಿ ಟೆಂಡರ್ ಫಾರಂಗಳನ್ನು ದಿ: 09-04-2007 ಸಾಯಂಕಾಲ 5.00 ಘಂಟೆವರೆಗೆ ವಿತರಿಸಲಾಗುವುದು.

3. ಭರ್ತಿ ಮಾಡಿದ ಮೂಲ ಮತ್ತು ನಕಲು ಟೆಂಡರ್ ಫಾರಂಗಳನ್ನು ದಿ: 12-04-2007 ಸಾಯಂಕಾಲ 4.30 ಘಂಟೆಯೊಳಗಾಗಿ ಸ್ವೀಕರಿಸಲಾಗುವುದು ಹಾಗೊ ಟೆಂಡರ್‌ಗಳನ್ನು ಸಾಧ್ಯವಾದರೆ ಆದೇ ದಿನ ಅಥವಾ ಮುಂದಿನ ದಿನಗಳಲ್ಲಿ ಹಾಜರಿರುವ ಗುತ್ತಿಗೆದಾರರ ಸಮಕ್ಷಮದಲ್ಲಿ ತೆರೆಯಲಾಗುವುದು.

4. ಇ.ಎಂ.ಡಿ. ಹಣವನ್ನು ನಗದಾಗಿ ಈ ನಗರಸಭೆಯಲ್ಲಿ ಪಾವತಿಸಿದ ರಶೀದಿ ಅಥವಾ ಪೌರಾಯುಕ್ತರ ಹೆಸರಿನಲ್ಲಿ ಡಿ.ಡಿ. ಖರೀದಿಸಿ ಲಗತ್ತಿಸುವುದು ಪ್ರತಿ ಕಾಮಗಾರಿಗೆ ಪ್ರತ್ಯೇಕವಾಗಿ ಇ.ಎಂ.ಡಿ ಹಣವನ್ನು ಸಲ್ಲಿಸತಕ್ಕದ್ದು ಇಲ್ಲವಾದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

5. ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಕಾಮಗಾರಿಗಳಿಗೆ ಸಂಬಂಧಿಸಿದ ಸ್ಥಳಗಳನ್ನು ಮತ್ತು ಅಂದಾಜು ಪತ್ರಗಳನ್ನು ಪೂರ್ವಭಾವಿಯಾಗಿ ಪರಿಶೀಲಿಸಿಕೊಂಡು ಟೆಂಡರ್ ದರಪಟ್ಟಿ ಸಲ್ಲಿಸತಕ್ಕದ್ದು. ಆನಂತರ ತಕರಾರಿಗೆ ಅವಕಾಶವಿರುವುದಿಲ್ಲ. ಟೆಂಡರ್‌ದಾರರು ಪಿ.ಡಬ್ಲ್ಯೂ.ಡಿ ಕೋಡ್ 65 ಮತ್ತು 66ರಲ್ಲಿ ನಮೂದಾಗಿರುವ ಎಲ್ಲಾ ಷರತ್ತುಗಳಿಗೂ ಬದ್ಧರಾಗಿರತಕ್ಕದ್ದು.

PDF Created with deskPDF PDF Writer - Trial :: http://www.docudesk.com

6. ಟೆಂಡರ್‌ದಾರರು ಟೆಂಡರ್ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

7. ಟೆಂಡರ್‌ದಾರರು ಟೆಂಡರ್ ಲಕೋಟೆಯ ಮೇಲೆ ಟೆಂಡರ್ ಕ್ರ.ಸಂ. ಮತ್ತು ಕಾಮಗಾರಿ ಹೆಸರನ್ನು ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು ಹಾಗೂ ಗುತ್ತಿಗೆದಾರರು ತಮ್ಮ ಪೂರ್ಣ ಅಂಚೆ ವಿಳಾಸವನ್ನು ಟೆಂಡರ್ ಲಕೋಟೆ ಮತ್ತು ಟೆಂಡರ್ ದರ ಪಟ್ಟಿಯಲ್ಲಿ ತಪ್ಪದೇ ಬರೆಯತಕ್ಕದ್ದು.

8. ಟೆಂಡರ್ ಮಂಜೂರಾತಿ ಪಡೆದ ಗುತ್ತಿಗೆದಾರರು ನಗರಸಭೆಯ ಪೌರಾಯುಕ್ತರು, ಅಭಿಯಂತರರು ನೀಡುವ ಸಲಹೆ ಮತ್ತು ತಾಂತ್ರಿಕ ನಿಯಮದಂತೆ ಕಾಮಗಾರಿ ನಿರ್ವಹಿಸಲು ಬದ್ದರಾಗಿರತಕ್ಕದ್ದು.

9. ಕಾಮಗಾರಿ ನಿರ್ವಹಣೆಗೆ ಪಾವತಿಸಲಾಗುವ ಬಿಲ್ಲು ಮೊಬಲಗಿನ ನಂತರ ಬರಬಹುದಾದ ಯಾವುದೇ ಆಡಿಟ್ ಆಕ್ಷೇಪಣೆಗೆ ಗುತ್ತಿಗೆದಾರರನ್ನೇ ನೇರವಾಗಿ ಹೊಣೆಗಾರರನ್ನಾಗಿ ಗುರಿಪಡಿಸಲಾಗುತ್ತದೆ ಇದಕ್ಕೆ ಬದ್ದರಾಗಿರತಕ್ಕದ್ದು.

10. ಮಂಜೂರಾತಿ ಪಡೆದ ಗುತ್ತಿಗೆದಾರರು ನಿಗಧಿಪಡಿಸಿದ ಕಾಲಾವಧಿಯಲ್ಲಿ ಕಾಮಗಾರಿಯನ್ನು ನಿರ್ವಹಿಸದಿದ್ದಲ್ಲಿ ಅಂತಹ ಗುತ್ತಿಗೆದಾರರ ಬಗ್ಗೆ ಪಿ.ಡಬ್ಲ್ಯೂ.ಡಿ-65ರಲ್ಲಿ ನಮೂದಿಸಿರುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡ ನಂತರ ಸ್ಥಳದಲ್ಲಿ ಉಳಿಯಬಹುದಾದ ಅನುಪಯುಕ್ತ ಸಾಮಾಗ್ರಿಗಳನ್ನು ಅಭಿಯಂತರರ ಸೂಚನೆಯಂತೆ ತೆಗೆದುಹಾಕಿಸಿ ಸ್ವಚ್ಚಗೊಳಿಸಲು ಗುತ್ತಿಗೆದಾರರು ಬದ್ದರಾಗಿರತಕ್ಕದ್ದು.

11. ಟೆಂಡರ್ ಮಂಜೂರಾತಿಯು ನಗರಸಭೆ ಕಾಯ್ದೆ ಹಾಗು ನಿಯಾಮಾವಳಿಯಂತೆ ಕಾಯ್ದಿರಿಸಲಾಗಿದೆ.

12. ಟೆಂಡರ್ ಮಂಜೂರಾತಿಯಾದ ಗುತ್ತಿಗೆದಾರರು ಛಾಪಾ ಕಾಗದದ ಮೂಲಕ ಮುಚ್ಚಳಿಕೆ ಸಲ್ಲಿಸಿ ಒಂದು ವಾರದಲ್ಲಿ ಸಂಬಂಧಿಸಿದ ಅಭಿಯಂತರರುಗಳಿಂದ ಕಾಮಗಾರಿ ನಿರ್ವಹಣ ಸ್ಥಳವನ್ನು ಗುರ್ತು ಮಾಡಿಸಿಕೊಂಡು ಕಾಮಗಾರಿ ಪ್ರಾರಂಭಿಸತಕ್ಕದ್ದು ತಪ್ಪಿದಲ್ಲಿ ಠೇವಣಿ ಹಣವನ್ನು ನಗರಸಭೆಗೆ ಅಮಾನತ್ತುಗೊಳಿಸಿ ಈ ಕಾಮಗಾರಿ ನಿರ್ವಹಣೆಯಿಂದ ಉಂಟಾಗಬಹುದಾದ ನಷ್ಟ ಮತ್ತು ತುಷ್ಠಿಗಳಿಗೆ ಟೆಂಡರ್‌ದಾರರೇ ನೇರ ಹೊಣೆಗಾರರಾಗಿರುತ್ತಾರೆ. ಅಂತಹ ಗುತ್ತಿಗೆದಾರರುಗಳ ವಿರುದ್ಧ ಅಗತ್ಯ ಶಿಸ್ತಿನ ಕ್ರಮಕೈಗೊಳ್ಳಲಾಗುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಳ್ಳಲಾಗಿದೆ.

13. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ, ಹಿಂತೆಗೆದುಕೊಳ್ಳುವ ಆಥವಾ ರದ್ದು ಪಡಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

14. ಪೂರ್ಣಗೊಂಡ ಕಾಮಗಾರಿಯ ಅಂತಿಮ ಬಿಲ್ ಪಾವತಿಸಿದ ದಿನಾಂಕದಿಂದ ಮುಂದುವರೆದಂತೆ ಕಾಮಗಾರಿಯ ನಿರ್ವಹಣೆಯನ್ನು 2 ವರ್ಷದ ಅವಧಿಯವರೆಗೆ ಗುತ್ತಿಗೆದಾರರೇ ಯಾವುದೇ ವೆಚ್ಚ ನಿರೀಕ್ಷಿಸದೆ ನಿರ್ವಹಿಸತಕ್ಕದ್ದು

15. ಬಿಲ್ಲುಗಳಲ್ಲಿ ಸರ್ಕಾರ ಸೂಚಿಸಿರುವ ತೆರಿಗೆಗಳನ್ನು ಕಟಾಯಿಸಲಾಗುವುದು.

PDF Created with deskPDF PDF Writer - Trial :: http://www.docudesk.com

16. ಟೆಂಡರ್ ನಿಗಧಿತ ಷೆಡ್ಯೂಲ್ ದರಗಳಿಗಿಂತ ಕಡಮೆ ದರ ನಮೂದಿಸುವ ಗುತ್ತಿಗೆದಾರರು ಅಂತಹ ವ್ಯತ್ಯಾಸದ ಮೊತ್ತವನ್ನು ಡಿ.ಡಿ. ಮೂಲಕ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು ಮತ್ತು ನಿಗಧಿತ ವ್ಯತ್ಯಾಸದ ಮೊತ್ತಕ್ಕಿಂತ ಕಡಿಮೆ ಡಿ.ಡಿ. ಇದ್ದ ಪಕ್ಷದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.

17. ಅಂದಾಜು ಮೊತ್ತ 5.00 ಲಕ್ಷಕ್ಕಿಂತ ಮೇಲ್ಪಟ್ಟ ಕಾಮಗಾರಿಗಳಿಗೆ ಕೆಲಸ ಪೂರ್ಣಗೊಂಡ ನಂತರ ಕಾಮಗಾರಿಯ ಗುಣಮಟ್ಟದ ಬಗ್ಗೆ ಮೂರನೇ ವ್ಯಕ್ತಿಯಿಂದ (Thirty Party Inspection) ಪರಿಶೀಲಿಸಿದ ನಂತರ ಬಿಲ್‌ನ್ನು ಪಾವತಿಸಲಾಗುವುದು.

18. ಹೆಚ್ಚಿನ ವಿವರಗಳನ್ನು ಹಾಗು ಕಾಮಗಾರಿಗಳ ವಿವರಗಳನ್ನು ಕಛೇರಿ ವೇಳೆಯಲ್ಲಿ ಬಂದು ಪಡೆಯಬಹುದಾಗಿದೆ.

| ಕ. ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ (ಲಕ್ಷ ರೂ. ಗಳಲ್ಲಿ) | ಇ.ಎಂ.ಡಿ ಮೊತ್ತ | ಕೆಲಸ ಪೂರ್ಣಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|
| 1 | ವಾರ್ಡ್.ನಂ.31 ರ ಅರ್ಚಕರಹಳ್ಳಿ ಬಡಾವಣೆಯ ಆಶ್ರಯ ನಿವೇಶನಗಳಿಗೆ ಸಂಪರ್ಕ ಸೇತುವೆ ನಿರ್ಮಾಣ ಮತ್ತು ಕಲ್ವರ್ಟ್ ನಿರ್ಮಾಣ ಮಾಡುವುದು. | 6.70 | 13400 | 90 ದಿನಗಳು | 3 ನೇ ದರ್ಜೆ ಮತ್ತು ಮೇಲ್ಪಟ್ಟು |
| 2 | ವಾರ್ಡ್ ನಂ. 28ರ ದೇವೆಗೌಡರ ಮನೆ ಮುಂಭಾಗ ಕಾಂಕ್ರೀಟ್ ರಸ್ತೆ ನಿರ್ಮಾಣ. | 1.50 | 3750 | 90 ದಿನಗಳು | 3 ನೇ ದರ್ಜೆ ಮತ್ತು ಮೇಲ್ಪಟ್ಟು |
| 3 | ವಾರ್ಡ್.ನಂ.21 ರ ಅರ್ಕೇಶ್ವರ ಕಾಲೋನಿಯ ಹಿಂದೂ ಸ್ಮಶಾನದಲ್ಲಿ ಚಿತಾಗಾರ ನಿರ್ಮಿಸುವುದು. | 1.50 | 3750 | 90 ದಿನಗಳು | 3 ನೇ ದರ್ಜೆ ಮತ್ತು ಮೇಲ್ಪಟ್ಟು |

ಸಹಿ

ಪೌರಾಯುಕ್ತರು
ನಗರಸಭೆ, ರಾಮನಗರ

PDF Created with deskPDF PDF Writer - Trial :: http://www.docudesk.com